International Journal of Kannada Research 2022; 8(4): 33-35




International Journal of Kannada Research
www.kannadajournal.com

**ISSN: 2454–5813**
IJKR 2022; 8(4): 33-35
© 2022 IJKR
www.kannadajournal.com
Received: 19-08-2022
Accepted: 21-09-2022

**ಜೈಭೀಮ ಸಿದ್ಧಣ್ಣ ಹೋಳಿಕೇರಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ, ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ಕರ್ನಾಟಕ, ಭಾರತ

**Corresponding Author:**
**ಜೈಭೀಮ ಸಿದ್ಧಣ್ಣ ಹೋಳಿಕೇರಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ, ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ಕರ್ನಾಟಕ, ಭಾರತ

# ಡಾ. ಅರ್ಜುನ ಗೊಳಸಂಗಿ ಅವರ ಬದುಕು-ಸಾಹಿತ್ಯ

**ಜೈಭೀಮ ಸಿದ್ಧಣ್ಣ ಹೋಳಿಕೇರಿ**

ಕನ್ನಡ ದಲಿತ ಸಾಹಿತ್ಯ ಚಳವಳಿಗೆ ಒಂದು ಪರಂಪರೆಯಿದೆ. ಅದರೊಂದಿಗೆ ದಲಿತ ಸಾಹಿತ್ಯ ಸಂಘಟನೆಯ ಮೂಲಕ ಕರ್ನಾಟಕದೊಂದಿಗೆ ಚಿರಪರಿಚಿತರಾದ ಹೆಸರು ಡಾ. ಅರ್ಜುನ ಗೊಳಸಂಗಿ ಅವರದ್ದು. ಇವರೊಬ್ಬ ಮೂಲತಃ ಜಾನಪದ ಜೀವಿ. ಹಳ್ಳಿಗಾಡಿನ ಬದುಕನ್ನು ಅಪಾರವಾಗಿ ಪ್ರೀತಿಸಿದವರು. ಅಕ್ಷರ ಲೋಕ ಸಮುದಾಯದಿಂದ ವಂಚಿತರಾದವರ ಪರಂಪರೆಯಿಂದ ಬಂದವರು. ಶೋಷಣೆ, ಅಸಮಾನತೆ, ನೋವು, ಅವಮಾನಗಳು, ಜಾತೀಯತೆ, ಅಸ್ಪ್ರಶ್ಯತೆಯ ಕರಾಳ ಬದುಕನ್ನು ತನ್ನೊಡಲಲ್ಲಿ ಕಟ್ಟಿಕೊಂಡು ಬಂದವರು. ಹೀಗಾಗಿ ಇವರ ಮನೆತನ ಬಡತನದ ನೋವನ್ನು ಅನುಭವಿಸಿದರೂ ಸಹಿತ ಜಾನಪದ ಸಾಹಿತ್ಯ ಕಲೆಗಳ ಮೂಲಕ ಶ್ರೀಮಂತವಾದ ಮನೆತನ. ಇವರ ಅಜ್ಜ-ಅಜ್ಜಿ, ತಂದೆ-ತಾಯಿಗಳು ಹಾಗೂ ಕೇರಿಯಲ್ಲಿ ಹಾಡುವ ಜನಪದ ಹಾಡುಗಳನ್ನು, ಕತೆಗಳನ್ನು ಕೇಳಿ-ನೋಡಿ-ಅನುಭವಿಸುತ್ತಲೇ ತನ್ನೊಳಗೆ ಅವು ಪ್ರವೇಶ ಹೊಂದಿ ತಾವು ಬಾಲ್ಯದಿಂದಲೇ ಗುಣಗುಣಿಸುತ್ತಲೇ ಬಂದವರು. ಹೀಗಾಗಿ ಜಾನಪದ ಜೀವಿಯಾಗಿ ಜಾನಪದ ಲೋಕದ ಸಾಂಸ್ಕೃತಿಕ ನಾಯಕರಾದಂತೆ ಮುಂದೆ ಕವಿಯಾಗಿ, ಕಥೆಗಾರರಾಗಿ, ನಾಟಕಕಾರರಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ, ವೈಚಾರಿಕ ಚಿಂತಕರಾಗಿ, ಕನ್ನಡ ಅಧ್ಯಾಪಕರಾಗಿ, ಮಾರ್ಗದರ್ಶಕರಾಗಿ, ದಲಿತ ಸಾಹಿತ್ಯ ಸಂಘಟನೆ ಮಾಡುತ್ತ ಬಂದ ಬಹುಮುಖ ಪ್ರತಿಭಾವಂತ ವ್ಯಕ್ತಿ-ಶಕ್ತಿಗಳಲ್ಲಿ ಡಾ. ಅರ್ಜುನ ಗೊಳಸಂಗಿ ಮೊದಲ ಸ್ಥಾನದಲ್ಲಿ ನಿಲ್ಲುವರು.

ಡಾ. ಗೊಳಸಂಗಿ ಅವರು ಬಿಜಾಪೂರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಗೊಳಸಂಗಿ ಎಂಬ ಗ್ರಾಮದ ದಲಿತ ಮನೆತನದ ಯಲ್ಲಪ್ಪ ಮತ್ತು ಮಲಕವ್ವರವರ ಮಗನಾಗಿ ೧೦.೦೭.೧೯೬೬ ರಂದು ಜನಿಸಿದರು. ಗೊಳಸಂಗಿಯಲ್ಲಿಯೇ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಯಿತು. ತೆಲಗಿಯ ಹೈಸ್ಕೂಲ್‌ದಲ್ಲಿ ಪ್ರೌಢಶಿಕ್ಷಣಾಭ್ಯಾಸ, ಹೂವಿನ ಹಿಪ್ಪರಗಿಯ ಡಾ.ಬಿ.ಜಿ.ಬಿ. ಪದವಿಪೂರ್ವ ಕಾಲೇಜಿನಲ್ಲಿ ಪಿ.ಯು.ಸಿ., ಸಿಂದಗಿಯ ನೂತನ ಕಲಾ ಮಹಾವಿದ್ಯಾಲಯದಿಂದ ಬಿ.ಎ. ಪದವಿ ಪಡೆದುಕೊಂಡು, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ. ಕನ್ನಡ ಪದವಿಯನ್ನು ಪೂರೈಸಿದರು. ಪ್ರಾಧ್ಯಾಪಕ ಹಾಗೂ ಬಂಡಾಯ ಸಾಹಿತಿಗಳಾದ ಡಾ. ಬುದ್ಧಣ್ಣ ಹಿಂಗಮಿರೆ ಅವರ ಮಾರ್ಗದರ್ಶನದಲ್ಲಿ 'ದಲಿತರ ಬದುಕು ಮತ್ತು ಸಂಸ್ಕೃತಿ-ಜಾನಪದೀಯ ಅಧ್ಯಯನ' ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿ ಡಾಕ್ಟರೇಟ್ ಪದವಿ ಪಡೆದರು. ಅವರ ಓದುವ ಹುಚ್ಚು ಬಿಡಲಿಲ್ಲ. ಹಿಂದಿ ವಿದ್ವಾನ್, ರೆಡ್‌ಕ್ರಾಸ್, ಎನ್.ಎಸ್.ಎಸ್.ದ ಜೊತೆಗೆ ಯು.ಜಿ.ಸಿ. ಉಪನ್ಯಾಸಕರ ಅರ್ಹತಾ ಪರೀಕ್ಷೆ (ಎನ್.ಇ.ಟಿ) ಪಾಸಾದರು. ಬಸವೇಶ್ವರ ಡಿಪ್ಲೋಮಾ, ಅಂಬೇಡ್ಕರ್ ಡಿಪ್ಲೋಮಾಗಳನ್ನು ಸಹ ಎಂ.ಎ. ಜೊತೆ ಜೊತೆಗೆ ಅಧ್ಯಯನ ಮಾಡಿ ಅಪಾರವಾದ ಜ್ಞಾನವನ್ನು ಸಂಪಾದಿಸಿದರು.

ತಮ್ಮ ಅಧ್ಯಯನ ಮುಗಿದ ತಕ್ಷಣ ಅಲ್ಲಲ್ಲಿ ಬೋಧನೆ ಮಾಡುತ್ತಾ ಬಂದವರು. ಅವರು ಸಂಪಾದಿಸಿದ ಜ್ಞಾನಕ್ಕೆ ಹುಲಕೋಟಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಗದಗ ಸಹಕಾರಿ ಜವಳಿ ಗಿರಣಿಯ ಪದವಿಪೂರ್ವ ಕಾಲೇಜನಲ್ಲಿ ೧೯೯೪ ರಿಂದ ಕನ್ನಡ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿ ಹಿರಿಯ ಶ್ರೇಣಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಾರೆ. ಅಪಾರವಾದ ಬೋಧನಾನುಭವ ಹೊಂದಿರುವರು. ಸಾವಿರಾರು ವಿದ್ಯಾರ್ಥಿಗಳ ಮನವನ್ನು ಕಲಕಿದವರು, ಅವರ ಭವಿಷ್ಯದ ಜೀವನಕ್ಕೆ ದಾರಿ ದೀಪವಾದವರು. ಇವರ ಕೈಯಲ್ಲಿ ಅನೇಕ ವಿದ್ಯಾರ್ಥಿಗಳು ಪಳಗಿದ್ದಾರೆ. ಕೇವಲ ಓದು-ಅಂಕ ಪಡೆದು ಹೋಗುವುದಲ್ಲ. ಅದರೊಂದಿಗೆ ಮಾನವೀಯತೆ ಮನುಷ್ಯತ್ವದ ಸಂಸ್ಕೃತಿ ಕಲಿಸಬೇಕೆಂಬ ಆದಮ್ಯ ಕನಸು ಹೊತ್ತವರು. ಹಾಗೇ ಬದುಕ-ಬರಹ-ನಡೆ-ನುಡಿ ಒಂದಾಗಿಸಿದ ಅಪರೂಪದ ಉಪನ್ಯಾಸಕರಾದವರು. ಸುದೀರ್ಘವಾದ ಇಪ್ಪತ್ತೆಂಟು ವರ್ಷಗಳ ಕಾಲ ಬೋಧನಾ ಅನುಭವ ಹೊಂದಿದವರು.

ಶಿಕ್ಷಣ ಸಂಸ್ಥೆ ಮತ್ತು ಕಾಲೇಜು ವಹಿಸಿದ ಎಲ್ಲಾ ಕಾರ್ಯಗಳನ್ನು ಮನಸಾರೆ ಅಪ್ಪಿ-ಒಪ್ಪಿಕೊಂಡು ಕೆಲಸ ನಿರ್ವಹಿಸಿದ್ದಾರೆ. ಆ ಮೂಲಕ ಗಮನ ಸೆಳೆದವರು. ಇವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾ ಮಾರ್ಗದರ್ಶಕರಾಗಿದ್ದಾರೆ. ಶ್ರೀ ಜಗದ್ಗುರು ತೋಂಟದಾರ್ಯ ಮಠ ಡಂಬಳ-ಗದಗದ ಲಿಂಗಾಯತ ಅಧ್ಯಯನ ಸಂಸ್ಥೆಯ ಸಂಶೋಧನಾ ಕೇಂದ್ರದ ಸಂಯೋಜಕರಾಗಿದ್ದಾರೆ. ಹೀಗೆ ಶೈಕ್ಷಣಿಕವಾದ ಹಲವು ಕಾರ್ಯ ಚಟುವಟಿಕೆಗಳಲ್ಲಿ ಭಾಗಿಯಾಗಿ ಅವರು ಕೊಟ್ಟ ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಬಂದವರು.

ಇವರು ಕಾವ್ಯ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದಾರೆ. ಚುಟುಕು, ದಲಿತ-ಬಂಡಾಯದ ಹಾಡುಗಳು, ಜನಪದ ಶೈಲಿಯಲ್ಲಿ ರಚನೆ, ಹತ್ತು ಹಲವು ಮುಖಗಳ ವೈಚಾರಿಕತೆ ಸಾಮಾಜಿಕ ಸಂವೇದನೆಯ ಕವಿತೆಗಳಿವೆ. ಹಾಗೂ ಪ್ರೀತಿ-ಪ್ರೇಮ, ಬಡತನ ಹತ್ತುಹಲವಾರು ಚಿಂತನೆಯ ಕಾವ್ಯಗಳನ್ನು ರಚಿಸಿದ್ದಾರೆ. ಹಲವು ವಸ್ತು-ವೈವಿಧ್ಯತೆಯ ಕಾವ್ಯಗಳು ಗಮನಸೆಳೆಯುತ್ತವೆ. ಬಿಸಿಲೊಳಗಿನ ಬೆಳದಿಂಗಳು, ಬುದ್ಧ ಬೆಳಕು, ನನ್ನಜ್ಜಿ, ನನ್ನವ್ವ-ನನ್ನಾಕೆ ಎಂಬ ಕವನ ಸಂಕಲನಗಳು ಹೊರ ತಂದಿದ್ದಾರೆ. ಈ ಸಂಕಲನಗಳ ಮೂಲಕ ಭರವಸೆಯ ಹಾಗೂ ಹಿರಿಯ ಕವಿಯಾಗಿ ನಮಗೆ ಕಂಡುಬರುತ್ತಾರೆ. ಇವರ ಹಲವಾರು ಕವಿತೆಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಡಾ. ಗೋಳಸಂಗಿ ಅವರು ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಅಪಾರವಾದ ಕೃಷಿಯನ್ನು ಮಾಡಿದ್ದಾರೆ. ಸಂಶೋಧನೆಯಲ್ಲಿ ಅವರ ಆಸಕ್ತಿ. ಕ್ಷೇತ್ರಕಾರ್ಯವನ್ನು ಆದರಿಸಿಕೊಂಡು ಕೆಲಸ ಮಾಡಿದ್ದಾರೆ. ಗೊಳಸಂಗಿ ಗ್ರಾಮ ಒಂದು ಸಾಂಸ್ಕೃತಿಕ ಅಧ್ಯಯನ, ಡೊಳ್ಳಿನ ಪದಗಳು, ದಲಿತರ ಬದುಕು ಮತ್ತು ಸಂಸ್ಕೃತಿ-ಜಾನಪದೀಯ ಅಧ್ಯಯನ, ಆದಿ ಜಾಂಬವರ ಸಂಸ್ಕೃತಿ, ಬುಡ್ಗ ಜಂಗಮರು, ದಲಿತ ಲೋಕದ ಶೋಧ ಜಾನಪದೀಯ ಅಧ್ಯಯನ ಇವು ಅವರ ಜಾನಪದ ಸಂಶೋಧನೆ ಸಂಬಂಧಿಸಿದ ಕೃತಿಗಳು. ಇದರಲ್ಲಿ ಅವರ ಹೊಸ ನೋಟ-ಹೊಳವುಗಳನ್ನು ಕೊಡುವ ಮೂಲಕ ಇನ್ನು ಹೆಚ್ಚಿನ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿದ್ದಾರೆ.

'ದಲಿತ ಲೋಕದ ಶೋಧ' ಎಂಬ ಕೃತಿಯು ಇಂದಿನ ಜಾನಪದ ಅಧ್ಯಯನಕ್ಕೆ ಹೊಸ ದಾರಿ ಮಾಡಿಕೊಟ್ಟಿದೆ. ಲೇಖಕರ ಸ್ವಂತಃ ಅನುಭವ ಅವರ ಸಮಗ್ರ ಒಳನೋಟಗಳನ್ನು ಬಿತ್ತರಿಸುತ್ತದೆ. ಇದೊಂದು ಜನಾಂಗೀಯ ಅಧ್ಯಯನ ಒಂದು ಅರ್ಥದಲ್ಲಾದರೂ, ಇನ್ನೊಂದು ಸಾಂಸ್ಕೃತಿಕ ಅಧ್ಯಯನ ಎರಡೂ ಏಕ ಕಾಲಕ್ಕೆ ನಡೆದುಕೊಂಡು ಬಂದಿರುವುದನ್ನು ಸಮಗ್ರವಾಗಿ ಸಂಶೋಧಿಸಿದ್ದಾರೆ. ದಲಿತ ಪದದ ಅರ್ಥ ವಿವೇಚನೆ ಮತ್ತು ವ್ಯಾಪ್ತಿಯನ್ನು ಕುರಿತು ಹೇಳುತ್ತಾ ದಲಿತ ಪದದ ಅರ್ಥ-ವಿವರಣೆ ನೀಡುವುದು ಕಷ್ಟ. ಆದರೂ 'ದಲಿತ' ಎಂಬ ಪದದ ಅರ್ಥವನ್ನು ಸಾಮಾನ್ಯವಾಗಿ ಎರಡು ರೀತಿಯಲ್ಲಿ ಅರ್ಥಹಿಸಬಹುದಾಗಿದೆ. ಒಂದು, ಎಲ್ಲಾ ಜಾತಿ ಜನಾಂಗಗಳಲ್ಲಿರುವ ಶೋಷಿತ ಜನ ದಲಿತರೆಂದು, ಇನ್ನೊಂದು ಯಾರು ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಒಳಗಾಗಿದ್ದಾರೋ ಅವರು ಕೂಡ ದಲಿತರು. ಆದರೆ ಅಸ್ಪೃಶ್ಯರಷ್ಟು ತುಳಿತಕ್ಕೆ, ಶೋಷಣೆಗೆ ಒಳಗಾದವರೂ ಈ ಸಮಾಜದಲ್ಲಿ ಮತ್ತಾವ ಜನಾಂಗವು ಇಲ್ಲ. ಈ ಹಿನ್ನಲೆಯಲ್ಲಿ ದಲಿತ ಎಂಬ ಪದದ ಅರ್ಥವನ್ನು ಎಲ್ಲಾ ಜನಾಂಗದವರಿಗೆ ವಿಸ್ತಾರಗೊಳಿಸದೆ ಅದೊಂದು ಜನಾಂಗ. ಅದುವೇ ಅಸ್ಪೃಶ್ಯ ಜನಾಂಗ. ಹೀಗಾಗಿ ಹಲವು ವಿದ್ವಾಂಸರ ಹಾಗೂ ಡಾ. ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಇಟ್ಟುಕೊಂಡು ಪದ ವಿವೇಚನೆ ಮಾಡಿದ್ದಾರೆ.

ಕರ್ನಾಟಕದಲ್ಲಿ ದಲಿತ ಪ್ರಜ್ಞೆ ಎಂಬ ಪದ ಬಳಕೆ ಬಂದಿದ್ದು ೧೯೭೦ರ ದಶಕದಲ್ಲಿ. ಡಾ.ಬುದ್ಧಣ್ಣ ಹಿಂಗಮಿರೆ, ಡಾ. ಚನ್ನಣ್ಣ ವಾಲಿಕರ್, ಡಾ. ಸೋಮಶೇಖರ ಇಮ್ರಾಪೂರ ಇವರು 'ದಲಿತ' ಪತ್ರಿಕೆ ಆರಂಭಿಸಿದರು. ೧೯೭೪ ರಲ್ಲಿ ದಲಿತ ಸಂಘರ್ಷ ಸಮಿತಿ ಆರಂಭವಾದ ಮೇಲೆ ದಲಿತ ಪದದ ವ್ಯಾಪಕ ಪ್ರಜ್ಞೆ ಬಂದಿತು. ದಲಿತ ಪ್ರಜ್ಞೆ ಎಂದರೆ ಮಾನವ ಪ್ರಜ್ಞೆ ಎಂದರ್ಥ. ಬಹು ವಿಚಿತ್ರವಾದ ಈ ಅಧ್ಯಯನದಲ್ಲಿ ಕುರ್ರುಮಾಮಗಳ ಕುರಿತು ಅವರ ಮೂಲ ಹೆಸರು, ಮೂಲ, ಭೌತಿಕ-ಬದುಕು, ಊಟ-ವಸತಿ, ಉಡುಗೆ-ತೊಡಗೆ, ಭಾಷೆ, ವೃತ್ತಿ, ವೃತ್ತಿ ದೀಕ್ಷಾಪದ್ಧತಿ, ಭವಿಷ್ಯ ಹೇಳುವ ವಿಧಾನಗಳು, ಕೌಟುಂಬಿಕ ಹಾಗೂ ಸಾಮಾಜಿಕ ವ್ಯವಸ್ಥೆ, ಮತ್ತು ಅವರ ಹುಟ್ಟಿನಿಂದ ಶವಸಂಸ್ಕಾರದವರೆಗಿನ ಬದುಕಿಗೆ-ವೃತ್ತಿಗೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ಅವರು ಕ್ಷೇತ್ರಕಾರ್ಯ ಮೂಲಕ ಹೊರ ಹಾಕಿದ್ದಾರೆ. ಅತ್ಯಂತ ಕಷ್ಟಮಯ ಚಿಂತಾಜನಕ ಧಾರುಣ ಬದುಕನ್ನು ಕಳೆಯುತ್ತಿರುವ ಇವರಿಗೆ ಸರ್ಕಾರ ಹೆಚ್ಚಿನ ಗಮನ ಹರಿಸಿ ಒಂದೆಡೆ ಸ್ಥಿರ ನಲೆ ಒದಗಿಸಿ ಶಿಕ್ಷಣ ಕೊಡಿಸಿ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಸಿದಲ್ಲಿ ಈ ಜನಾಂಗದ ಬದುಕಿನಲ್ಲಿ ಹೊಸತನ ಕಾಣಲು ಸಾಧ್ಯ ಎಂದಿದ್ದಾರೆ.

ಬುರುಬುರು ಪೋಚಮ್ಮಗಳು ಅಲಕ್ಷಿತ ಜನಸಮುದಾಯದ ಅರೆ-ಅಲೆಮಾರಿ ಜನಾಂಗ, ಪೋಚಮ್ಮ ದೇವತೆ ಹೊತ್ತು ತಿರುಗುವವರು. ಉತ್ತರದಿಂದ ಬಂದ ದ್ರಾವಿಡ ಗುಂಪಿಗೆ ಸೇರಿದವರು. ಕರ್ನಾಟಕದಲ್ಲಿ ನೆಲೆನಿಂತ ಅವರ ಜೀವನ ವಿಧಾನ ಬದುಕು, ಕಲೆ, ಭಾಷೆ, ಆಚರಣೆಗಳು, ನ್ಯಾಯ ನಿರ್ಣಯದ ಅನೇಕ ಅಂಶಗಳನ್ನು ಬಹು ಅರ್ಥಗರ್ಭಿತವಾಗಿ ವಿವರಿಸಿದ್ದಾರೆ. ದಾಸರು ಎಂಬ ಜನಾಂಗ ಭವ್ಯ ಸಾಂಸ್ಕೃತಿಕ ಪರಂಪರೆ ಹೊಂದಿದ್ದಾರೆ. ಕರ್ನಾಟಕದಾದ್ಯಂತ ಹರಡಿಕೊಂಡಿರುವ ದಾಸರ ಜನಪದ ವೃಂದದ ಜೀವನ ಇತಿಹಾಸ ತುಂಬಾ ರೋಚಕವಾದದ್ದು, ಇದೊಂದು ಅಲೆಮಾರಿ ವೃತ್ತಿನಿರತ ತಂಡ. ತಮ್ಮ ಕಲೆಯ ಮೂಲಕ ಜನರ ಮನಸ್ಸನ್ನು ರಂಜಿಸಿ ತಾವು ಮಾತ್ರ ದುಗುಡ ದುಮ್ಮಾನದಲ್ಲಿಯೇ ಜೀವ ಸವಿಸಿದವರು. ದಾಸರಲ್ಲಿ ಪ್ರಮುಖರಾಗಿ ಹೊಲೆಯ ದಾಸರು ಮತ್ತು ಮಾದಿಗ ದಾಸರು ಎಂಬ ಗುಂಪುಗಳಾಗಿ ವಿಂಗಡಿಸುತ್ತಾರೆ. ಈ ಪಂಗಡಗಳಲ್ಲಿ ಅನೇಕ ಒಳ ಪಂಗಡಗಳಿವೆ. ದಾಸರ ಮೂಲ, ಒಳಪಂಗಡ, ಭೌತಿಕ ಬದುಕು, ಊಟೋಪಚಾರ, ವೇಷಭೂಷಣ, ಭಾಷೆ, ವಸತಿ, ಕುಟುಂಬ ಪದ್ಧತಿ, ದಾಸರಾಟ ಹೀಗೆ ಇವರ ಜೀವನದ ಆರಂಭದಿಂದ ಅಂತ್ಯಸಂಸ್ಕಾರದವರೆಗಿನ ಬದುಕು ಇಲ್ಲಿ ಅನಾವರಣಗೊಂಡಿದೆ. ಇವರ ಭಾಷೆ ತೆಲುಗು.

ಸುಣಗಾರ ಲಿಂಗಾಯತರು ಬುಡಕಟ್ಟು ಜನಾಂಗದವರು. ಸುಣ್ಣದ ಹರಳುಗಳನ್ನು ಆಯ್ದು ಭಟ್ಟಿ ಹಾಕಿ ಪುಡಿಯನ್ನಾಗಿ ಮಾಡುವ ವೃತ್ತಿಯಲ್ಲಿ ನಿರತರಾದವರನ್ನು ಸುಣಗಾರರು ಎನ್ನುವರು. ಇವರಲ್ಲಿ ೩೯ಕ್ಕಿಂತ ಹೆಚ್ಚು ಉಪ ಜಾತಿಗಳು ಇವೆ. ಟೋಕ್ರಿ-ಕೋಳಿ, ಸುಣಗಾರ, ಕಬ್ಬಲಿಗ, ಅಂಬಿಗ, ಬೆಸ್ತರು, ಗಂಗಾಮತ, ಕಬ್ಬೇರ ಹೀಗೆ ಹಲವಾರು ಹೆಸರುಗಳಿಂದ ಗುರುತಿಸಬಹುದು. ಈ ಜನಾಂಗದ ಹಿನ್ನಲೆ, ಭಾಷೆ, ಸಾಮಾಜಿಕ-ಕೌಟುಂಬಿಕ ರಚನೆ, ದೇವರು-ಧರ್ಮ-ಆಚರಣೆ ಮುಂತಾದವುಗಳು ಕುರಿತು ವಿವರಣೆ ಇಲ್ಲಿದೆ. ವಲಸೆ ಹೋಗುವ ವೃಂದಗಳು ಎಂಬ ಭಾಗದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವವರು ವೃತ್ತಿ ಕಲೆಗಳಲ್ಲಿ ಕರಗತರು. ತಮ್ಮ ಕಲೆ ಪ್ರದರ್ಶನಕ್ಕೆ ಹೊರಟವರು. ಕೌಲೆತ್ತಿನವರು, ಗರ್ದಿಗಮ್ಮತ್ತಿನವರು, ಗುರ್ಚಿಗಳು, ಪಾಸಿಪರದಿಗಳು, ಕರಡಿಯಾಟದವರು ಹಲವಾರು ಪ್ರದರ್ಶನ ಕಲೆಗಳನ್ನು ಮಾಡುತ್ತ ಊರೂರು ಹೊರಟವರು. ಇವರು ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತ ತಮ್ಮ ಬದುಕು ಸಂಸ್ಕೃತಿ ರೂಡಿಸಿಕೊಂಡವರು, ಕೊನೆಗೆ ವರ್ಷದಲ್ಲಿ ಒಂದು ಕಡೆ ನೆಲೆನಿಂತು ತಮ್ಮ ಹಬ್ಬ ಉತ್ಸವ ಆಚರಣೆ ಮಾಡುತ್ತಾರೆ. ಟಾಂಗಾವಾಲಗಳು ಇಂದಿನ ಆಧುನಿಕ ಯುಗದಲ್ಲಿ ಗಂಭೀರ ಪರಿಸ್ಥಿತಿಯಲ್ಲಿದ್ದಾರೆ. ಅವರ ನೀತಿ-ರೀತಿ ರಿವಾಜುಗಳು,

ಬದುಕು ಚಿಂತಾಜನಕವಾಗಿದೆ. ಅವರ ಪರಿಸ್ಥಿತಿ ಇಲ್ಲಿ ಗಮನ ಸೆಳೆಯುವ ಹಾಗೆ ಚಿತ್ರಿಸಿದ್ದಾರೆ.

ಚಲವಾದಿ ಜನಾಂಗದ ಮೂಲವನ್ನು ಹುಡುಕುತ್ತ ಹೋಗಿದ್ದಾರೆ. ಛಲವನ್ನು ಸಾಧಿಸುವವರು ಚಲವಾದಿಗಳು. ಕುಡಗಾಚಿ, ಚಲವಾದಿ ಎಂಬ ಪದಗಳು ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಉಲ್ಲೇಖವಾಗಿದೆ. ಚಲವಾದಿ ಪದಕ್ಕೆ ಪರ್ಯಾಯವಾಗಿ ಅನೇಕ ದಾಖಲೆಗಳಲ್ಲಿ ಹೊಲೆಯ ಪದದ ಬಳಕೆಯಾಗಿರುವುದು ಕಂಡು ಬರುತ್ತದೆ. ಹೊಲೆಯರು ನಾಡಿನ ಪ್ರಮುಖ ಕೃಷಿ ಕಾರ್ಮಿಕರು. ಚಲವಾದಿಯರ ಮೂಲವನ್ನು ಇಲ್ಲಿ ತಿಳಿಸಲಾಗಿದೆ. ದಲಿತರು ಮತ್ತು ಸಾಮಾಜಿಕ ನ್ಯಾಯ ಎಂಬಲ್ಲಿ ಪ್ರಸ್ತುತ ದಲಿತರ ಸ್ಥಿತಿಯನ್ನು ವಿವರಿಸಿ, ಅವರ ನೈಜಸ್ಥಿತಿ ಅನಾವರಣ ಮಾಡಿ ಸಾಮಾಜಿಕ ನ್ಯಾಯ ಹೇಗೆ ಎತ್ತಿಹಿಡಿಯಬೇಕೆಂಬ ಆಶಯವನ್ನು ಇಲ್ಲಿ ಚಿತ್ರಿಸಲಾಗಿದೆ.

ಬುಡ್ಗ ಜಂಗಮರು ಎಂಬ ಕೃತಿಯಲ್ಲಿ ಸಂಪೂರ್ಣ ಬುಡ್ಗ ಜಂಗಮರ ಕುರಿತು ಸಂಶೋಧನೆ ಹೊರಹಾಕಿದ್ದಾರೆ. ಕ್ಷೇತ್ರಕಾರ್ಯ ಅಧ್ಯಯನದ ಮೂಲಕವೇ ಹೊರಬಂದ ಕೃತಿಯಾಗಿದೆ. ಬುಡ್ಗ ಜಂಗಮ ಪದ, ಅದರ ಉತ್ಪತ್ತಿ, ಅರ್ಥ ವಿವರಣೆ, ಅಲ್ಲಿಂದ ಪ್ರಮುಖವಾದ ವಿಚಾರಧಾರೆಗಳು ಹೇಳುತ್ತಲೇ ಅವರ ಪ್ರದೇಶ, ಜನಸಂಖ್ಯೆ, ಭಾಷೆ, ವೇಷ–ಭೂಷಣ, ಕುಟುಂಬ ಪದ್ಧತಿ, ಮದುವೆ, ದೇವರ–ಧರ್ಮ–ಆಚರಣೆ, ನ್ಯಾಯ ಪಂಚಾಯತಿ, ನಂಬಿಕೆ ಹೀಗೆ ಹತ್ತು ಪ್ರಮುಖ ಭಾಗಗಳಲ್ಲಿ ಅವರು ಸಮಗ್ರವಾಗಿ ವಿವೇಚಿಸಿ, ಬುಡ್ಗ ಜಂಗಮರ ಕುರಿತು ಸಂಪೂರ್ಣ ಮಾಹಿತಿ ಈ ಕೃತಿಯಲ್ಲಿ ನೀಡಿದ್ದಾರೆ.

ನಾಟಕ ಕ್ಷೇತ್ರದಲ್ಲಿ ಡಾ. ಗೊಳಸಂಗಿ ಅವರ ಸಾಧನೆ ಇದೆ. ಅವರು ಬಾಲ್ಯದಿಂದಲೂ ಬಯಲಾಟ, ನಾಟಕಗಳನ್ನು ನೋಡುತ್ತ ಬಂದವರು. ಅಲ್ಲದೇ ಸ್ವತಃ ಅವರು ನಾಟಕಗಳಲ್ಲಿ ಅಭಿನಯಿಸುವುದರಿಂದ ಸಹಜವಾಗಿ ನಾಟಕದ ಕಡೆಗೆ ಮುಖ ಮಾಡಿದ್ದಾರೆ. ವಿಧವೆ ಮತ್ತು ಇತರ ಏಕಾಂಕ ನಾಟಕಗಳು, ಉತ್ತರದೇವಿ ಹಾಗೂ ಇತರ ಜನಪದ ರೂಪಕಗಳು, ಗುರ್ಜಿ ಹಾಗೂ ಇತರ ಏಕಾಂತ ನಾಟಕಗಳೆಂಬ ನಾಟಕಗಳನ್ನು ಪ್ರಕಟಿಸಿದ್ದಾರೆ. ಈ ನಾಟಕಗಳು ಪ್ರಚಲಿತ ವಿದ್ಯಮಾನಗಳ ಮೇಲೆ ಬೆಳಕು ಚಲ್ಲುತ್ತವೆ. ಸಾಮಾಜಿಕ ನಾಟಕಗಳೇ ಇಲ್ಲಿ ಹೆಚ್ಚಾಗಿವೆ. ಬಾಲ್ಯವಿವಾಹ, ವಿಧವಾ ಸಮಸ್ಯೆ, ವರದಕ್ಷಿಣೆ, ಮಹಿಳಾ ಶೋಷಣೆ, ದೇವದಾಸಿ ಪದ್ಧತಿ, ಅತ್ಯಾಚಾರ, ಜಾತೀಯತೆ, ಅಸಮಾನತೆ, ರಾಜಕೀಯ ತಲ್ಲಣ–ತವಕಗಳು, ಜನಪದ ನಂಬಿಕೆಗಳು ಹೀಗೆ ಹಲವಾರು ಸಮಸ್ಯೆ ಹಾಗೂ ಪ್ರಸ್ತುತ ಸನ್ನಿವೇಶಕ್ಕೆ ತಕ್ಕಂತೆ ನಾಟಕಗಳನ್ನು ರಚಿಸಿದ್ದಾರೆ. ಹಲವಾರು ಪಾತ್ರ ಚಿತ್ರಣ, ಸಂಭಾಷಣೆ, ನಿರೂಪಣೆ, ವಸ್ತು–ಭಾಷೆ–ಶೈಲಿಗಳಿಂದಲೂ ಗಮನ ಸೆಳೆಯುವ ನಾಟಕಗಳಾಗಿವೆ.

ಇದರಾಚೆಗೂ ಗೊಳಸಂಗಿಯವರು ಉರಿಯೊಳಗಣ ಕರ್ಪೂರ (ವಿಮರ್ಶೆ), ಕ್ಯಾಂಪಸ್ಸಿನಲ್ಲಿಯ ಪ್ರೇಮ ಪ್ರಸಂಗಗಳು (ಹರಟೆ), ಕಾ.ಹು.ಬಿಜಾಪೂರ (ಜೀವನ ಚರಿತ್ರೆ) ಕೃತಿಗಳನ್ನು ರಚಿಸಿದ್ದಾರೆ. ತಮ್ಮ ವಿಮರ್ಶಾ ಕೃತಿಯಲ್ಲಿ ಅನೇಕ ಕೃತಿಗಳನ್ನು ವಿಮರ್ಶಿಸಿದ್ದಾರೆ. ಹರಟೆಗಳಲ್ಲಿ ಪ್ರೇಮ ಪ್ರಸಂಗಗಳ ಮೂಲಕ ನಡೆದ ವಿಚಾರಗಳನ್ನು ಬಹು ಅರ್ಥಪೂರ್ಣ, ರಸವತ್ತಾಗಿ ಹೇಳುತ್ತಾ ಹೋಗಿದ್ದಾರೆ.

ಸಂಪಾದಕರಾಗಿ ಬಹು ಮಹತ್ವದ ಕೃತಿ ಸಂಪಾದಿಸಿದ್ದಾರೆ. 'ದಲಿತಜ್ಞ' ಎಂಬ ಸಂಪಾದನೆಯಲ್ಲಿ ಡಾ. ಅರವಿಂದ ಮಾಲಗತ್ತಿಯವರ ಕೃತಿಗಳ ವಿರ್ಮಶೆಯಿದೆ. ಇದರಲ್ಲಿ ಅವರ ಮೌಲಿಕ ಕೃತಿಗಳ ವಿಮರ್ಶೆ ನಡೆದಿದೆ. ನಾಡಿನ ಪ್ರಮುಖ ಬರಹಗಾರರ, ವಿದ್ವಾಂಸರ ಲೇಖನಗಳು ಇವೆ. ಮಾಲಗತ್ತಿಯವರ ಸಾಹಿತ್ಯದ ಮತ್ತು ಹಲವಾರು ಚಿಂತನಧಾರೆಯ ಮೌಲಿಕ ಬರಹಗಳು ಇವೆ. ಇದೊಂದು ಬೃಹತ್ ಸಂಪಾದನೆಯಾಗಿದೆ. ಅರವಿಂದ ಮಾಲಗತ್ತಿಯವರ ವಿಚಾರಧಾರೆಗಳನ್ನು ಹೊರಹಾಕುವಲ್ಲಿ ಸಫಲವಾಗಿದೆ. 'ಹುಸಿ ಇಲ್ಲದ ಗೂಡಿನೊಳಗೆ' ಜಾಜಿಮಲ್ಲಿಗೆ ಕವಿಯ ಕೃತಿಗಳ ವಿಮರ್ಶಾ ಸಂಪಾದನೆ. ಸತ್ಯಾನಂದ ಪಾತ್ರೋಟರ ಕಾವ್ಯ ಜೀವ ಸತ್ವದ ಕಾಳಜಿ ಇಲ್ಲಿ ಹರಿದಿದೆ. ಕಾವ್ಯಮಂಥನ, ಕ್ರತುಪುರ, ಜಡಭರತ ಸಾಹಿತ್ಯದ ಲೋಕನ, ಕನ್ನಡ ದಲಿತ ಸಾಹಿತ್ಯ ಸಮಾಲೋಕನ ಇವು ಗೊಳಸಂಗಿಯವರ ಸಂಪಾದನೆ ಕೃತಿಗಳು. ಇವು ಕನ್ನಡ ಸಾಹಿತ್ಯ ಲೋಕದಲ್ಲಿ ಗುರುತಿಸಬಹುದಾದ ಆಕರ ಸಂಪಾದನೆಗಳು. ಡಾ. ಅರ್ಜುನ ಗೊಳಸಂಗಿಯವರು ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವರ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಜಾನಪದೀಯತೆ, ಮಾನವೀಯತೆ, ದಲಿತ–ಸ್ತ್ರೀಪರ ಲೋಕದ ಕಾಳಜಿ ಎದ್ದು ಕಾಣುತ್ತದೆ. ದಲಿತ ಸಾಹಿತ್ಯ ಪರಿಷತ್ತನ ಐದು ಸಮ್ಮೇಳನಗಳ ಸಮಗ್ರ ನೋಟದ ಕೃತಿ ಹೊರಬಂದಿದೆ. ದಲಿತ ಚೇತನ, ಲಕ್ಕುಂಡಿ ಉತ್ಸವ ಸ್ಮರಣ ಸಂಚಿಕೆ, ದಲಿತ ಸಿರಿ, ಬೆಳ್ವೊಲ ಬೆಳಗು, ದಲಿತೋದಯ ಎಂಬ ಐದು ಸ್ಮರಣ ಸಂಚಿಕೆ ಹೊರತಂದಿದ್ದಾರೆ.

ಗೊಳಸಂಗಿಯವರದು ಸಂಘಟನೆಯಲ್ಲಿ ಎತ್ತಿದ ಕೈ. ಹೀಗಾಗಿ ದಲಿತ ಸಾಹಿತ್ಯ ಪರಿಷತ್ತ ಸಂಸ್ಥಾಪಕ ಅಧ್ಯಕ್ಷರಾಗಿ ಇದುವರೆಗೂ ಒಂಬತ್ತು ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ. ಸಂಪನ್ಮೂಲ ವ್ಯಕ್ತಿಯಾಗಿ ಹಲವಾರು ತರಬೇತಿ ಶಿಬಿರಗಳಲ್ಲಿ, ಕವಿಗೋಷ್ಠಿ, ಸಮ್ಮೇಳನಗಳಲ್ಲಿ ಕಾವ್ಯ ವಾಚನ, ಉಪನ್ಯಾಸ, ಆಶಯನುಡಿ, ಅಧ್ಯಕ್ಷತೆ ವಹಿಸಿದ್ದಾರೆ. ಪತ್ರಕರ್ತರಾಗಿ, ಸಂಪಾದಕರಾಗಿ, ಹಲವು ಆಯ್ಕೆ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಚೌಡಯ್ಯ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ, ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ, ಉತ್ತಮ ಜನಪದ ಹಾಡುಗಾರ, ಕನ್ನಡಶ್ರೀ, ಶಿಕ್ಷಣ ಭೂಷಣ, ಡಾ. ಸುಭಾಷ ಭರಣಿ ಪ್ರಶಸ್ತಿ, ಬಸವ ಚೇತನ, ಕನ್ನಡ ಸಿರಿ, ಕನ್ನಡ ಪುಸ್ತಕ ಪ್ರಾಧಿಕಾರದ ಕನ್ನಡ ಪರಿಚಾರಕ ಪ್ರಶಸ್ತಿ, ಮಲ್ಲೇಪುರಂ ಪ್ರತಿಷ್ಠಾನ ಪ್ರಶಸ್ತಿ ಲಭಿಸಿವೆ. ಹಾಗೆಯೇ ಬೇಲೂರಿನ ಉರಿಲಿಂಗ ಪೆದ್ದಿ ಮಠದಲ್ಲಿ ಜರುಗಿದ ಪ್ರಥಮ ಶೋಷಿತ ಸಮ್ಮಳನದ ಸರ್ವಾಧ್ಯಕ್ಷರಾಗಿದ್ದರು. ಡಾ. ಅರ್ಜುನ ಗೊಳಸಂಗಿಯವರದು ಬಹುಮುಖ ವ್ಯಕ್ತಿತ್ವ ಮನುಷ್ಯಪರವಾದ ಚಿಂತನೆಯ ಸಾಹಿತ್ಯ ರಚಿಸಿದಂತೆ ಜನಪರ ಸಂಘಟಕ, ಸಾಹಿತಿಯಾಗಿದ್ದಾರೆ.

### ಆಧಾರ ಗ್ರಂಥಗಳು


1. ದಲಿತ ಲೋಕದ ಶೋಧ – ಡಾ. ಅರ್ಜುನ ಗೊಳಸಂಗಿ, ದಲಿತ ಸಾಹಿತ್ಯ ಪರಿಷತ್ತು, ರಾಜ್ಯ ಘಟಕ, ಗದಗ–೨೦೦೯.
2. ಬುಡ್ಗ ಜಂಗಮರು – ಡಾ. ಅರ್ಜುನ ಗೊಳಸಂಗಿ, ದಲಿತ ಸಾಹಿತ್ಯ ಪರಿಷತ್ತು, ರಾಜ್ಯ ಘಟಕ, ಗದಗ–೨೦೧೧.
3. ಕರ್ನಾಟಕದ ದಲಿತ ಜಾನಪದ ವಿದ್ವಾಂಸರು – ಪ್ರೊ. ಎಚ್.ಟಿ.ಪೋತೆ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ–೨೦೨೦
4. ಸಾರಸ್ವತ – ಡಾ. ಗವಿಸಿದ್ಧಪ್ಪ ಪಾಟೀಲ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ–೨೦೨೧.